**<u>ದಿನಾಂಕಃ 10.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ವಾದಿ ಪರ ಶ್ರೀ ಎಸ್.ಬಿ.ಡಿ. ವಕೀಲರಿಂದಃ</u>**

1) ಕಳೆದ 35 ವರ್ಷಗಳಿಂದ ನನಗೆ ಪ್ರತಿವಾದಿಯ ಪರಿಚಯ ಇರುತ್ತದೆ. ನಾನು ಪ್ರಥಮ ದರ್ಜೆ ಸಹಾಯಕ ಆಗಿ ನಂತರ ಗ್ರಂಥಪಾಲಕನಾಗಿ ಬಡ್ತಿ ಹೊಂದಿ ಕೆಲಸ ಮಾಡುತ್ತಿದ್ದೇನೆ. ನನಗೂ ಮತ್ತು ಪ್ರತಿವಾದಿಗೂ ವೈಯಕ್ತಿಕವಾಗಿ ಯಾವುದೇ ವ್ಯವಹಾರ ಇರುವುದಿಲ್ಲ. ಕರಾರಿನ ವಿಚಾರವಾಗಿ ನಾನು ಮತ್ತು ಪ್ರತಿವಾದಿ ವಾದಿಯನ್ನು 2000ನೇ ಸಾಲಿನಲ್ಲಿ ಭೇಟಿ ಮಾಡಿದ್ದೆವು. ಮನೆಯನ್ನು ವ್ಯಾಪಾರ ಮಾಡುವ ವಿಚಾರದ ಸಲುವಾಗಿ ನಾವು ವಾದಿಯನ್ನು ಭೇಟಿಯಾಗಿದ್ದು ಆ ಕಾಲಕ್ಕೆ ನನ್ನ ಜೊತೆ ಪ್ರತಿವಾದಿ, ಪುಟ್ಟಮಲ್ಲಯ್ಯ ಹಾಗೂ ಕೃಷ್ಣ ಮೂರ್ತಿ ಹಾಜರಿದ್ದರು. ನಿಖರವಾಗಿ ಯಾವ ದಿನಾಂಕದಂದು ನಾವು ವಾದಿಯನ್ನು ಭೇಟಿ ಮಾಡಿದ್ದೆವು ಎಂದು ನನಗೆ ಈಗ ನೆನಪಿಲ್ಲ. 2 ಲಕ್ಷದ 50 ಸಾವಿರ ರೂಪಾಯಿಗಳಿಗೆ ಕ್ರಯದ ನಿಷ್ಕರ್ಶೆ ಆಗಿದ್ದು ಮುಂಗಡವಾಗಿ 2 ಲಕ್ಷದ 48 ಸಾವಿರ ಹಣವನ್ನು ಪ್ರತಿಫಲವಾಗಿ ನೀಡಿದ್ದರು. ದಾಖಲೆಗಳನ್ನು ಒದಗಿಸಲು ತಡ ಆಗಿದ್ದ ಕಾರಣ 2008 ರಲ್ಲಿ ಕರಾರಿನ ಕುರಿತು ದಾಖಲೆಯನ್ನು ಮಾಡಿಕೊಂಡರು. ನನ್ನ ಸಮ್ಮುಖದಲ್ಲಿಯೇ ಪ್ರತಿವಾದಿಯು ವಾದಿಗೆ 2 ಲಕ್ಷದ 48 ಸಾವಿರ ಹಣವನ್ನು ನೀಡಿದ್ದರು. ಸದರಿ ವ್ಯವಹಾರದ ಕುರಿತು ನೊಂದಣಿ ಕ್ರಯ ಪತ್ರ ಮಾಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಆ ಕಾಲಕ್ಕೆ ಕರಾರು ಪತ್ರವನ್ನು ಮಾಡಿಕೊಳ್ಳಲು ಅವಕಾಶ ಇದ್ದ ಕಾರಣ ಪಕ್ಷಗಾರರು ಕರಾರು ಪತ್ರ ಮಾಡಿಕೊಂಡಿದ್ದಾಗಿ ನುಡಿಯುತ್ತಾರೆ. 2 ಲಕ್ಷದ 48 ಸಾವಿರ ಹಣವನ್ನು ನೀಡಿದ ಸಂಬಂಧ ಪ್ರತಿವಾದಿ ಮತ್ತು ವಾದಿ ಯಾವುದಾದರೂ ಹಣ ಸಂದ ರಶೀದಿಯನ್ನು ಮಾಡಿಕೊಂಡಿದ್ದರೇ ಎಂಬ ಬಗ್ಗೆ ನನಗೆ ನೆನಪಿಲ್ಲ.

2) ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಹಾಸ್ಟಲ್ ಅನ್ನು ಪ್ರಾರಂಭ ಮಾಡಿದ್ದರು ಆದರೆ ಅವರು ಅದನ್ನು ಯಾವಾಗ ಮುಚ್ಚಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಪ್ರತಿವಾದಿಯು ಡಿ.ಟಿ. ರಾಮು ರವರ ಹೆಸರಿನಲ್ಲಿ ಯಾವುದೇ ಹಾಸ್ಟಲ್ ಅನ್ನು ನಡೆಸಿರಲಿಲ್ಲ ಆದರೂ ಸಹ ನಾನು ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರ ಕರಾರು ಪತ್ರವನ್ನು ಡಿಡಬ್ಲ್ಯೂ-2 ರವರ ಮನೆಯಲ್ಲಿ ಅಥವಾ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಮಾಡಿರಬಹುದು ಆದರೆ ಆ ಬಗ್ಗೆ ನನಗೆ ನೆನಪಿಲ್ಲ. ಅದನ್ನು 2008 ರಲ್ಲಿ ಮಾಡಿದ್ದು ದಿನಾಂಕ ನೆನಪಿಲ್ಲ. ವಾದಿ ಮತ್ತು ಪ್ರತಿವಾದಿ ಇಬ್ಬರೂ ಸೇರಿ ನಿಡಿ.1 ರ ಕರಾರು ಪತ್ರವನ್ನು ಬರೆಸಿದ್ದರು. ನಾನು ನಿಡಿ.1 ರ ಕರಾರು ಪತ್ರದ

ಸಂಗತಿಗಳನ್ನು ನೋಡಿದ್ದೆನು. ಡಿ.ಟಿ.ರಾಮುರವರ ಹೆಸರಿನಲ್ಲಿ ಹಾಸ್ಟಲ್ ಮಾಡುವುದಾಗಿ ಪ್ರತಿವಾದಿ ಕರಾರು ಪತ್ರದಲ್ಲಿ ನಮೂದಿಸಿದ್ದು ಸದರಿ ಹೆಸರಿನಲ್ಲಿಯೇ ಹಾಸ್ಟಲ್ ಮಾಡುವ ಉದ್ದೇಶದಿಂದ ವಾದಿಯು ಸಹಾ ಕರಾರು ಪತ್ರವನ್ನು ಮಾಡಿಕೊಟ್ಟಿರುವುದಾಗಿ ಹೇಳಿ ಪತ್ರದಲ್ಲಿ ನಮೂದಿಸಿರುತ್ತಾರೆ. ನಾನು ಹೇಳಿದಂತೆ ಆ ರೀತಿ ಯಾವುದೇ ಕರಾರು ಪತ್ರ ಅಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ಒಂದೇ ಕಾಲೇಜಿನಲ್ಲಿ ಕೆಲಸ ಮಾಡುವ ಕಾರಣ ಪ್ರತಿವಾದಿ ನನ್ನ ಮೂಲಕ ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತ ನಿಡಿ.1 ರ ಕರಾರು ಪತ್ರಕ್ಕೂ ಮತ್ತುವಾದಿಗೂ ಯಾವುದೇ ಸಂಬಂಧ ಇರದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಯಾವುದೇ ವಾರಸುದಾರರು ಇರದ ಕಾರಣ ಆಕೆಯ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3) ಈ ಹಿಂದೆ ನಾನು ಪ್ರತಿವಾದಿಯ ಪರವಾಗಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 45/2019 ರ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ವಾದಿಯು ದಾವಾ ಸ್ವತ್ತಿನ ಮಾಲೀಕರಾಗಿದ್ದು ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಬಾಡಿಗೆದಾರನಾಗಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಬಾಡಿಗೆದಾರನಾಗಿದ್ದು ಆತನನ್ನು ದಾವಾ ಸ್ವತ್ತಿನಿಂದ ಹೊರಹಾಕುವ ಸಲುವಾಗಿ ಈ ಪ್ರಕರಣ ದಾಖಲಾಗಿದೆ ಎಂಬ ವಿಚಾರ ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**